ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001.
ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 20-6-2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | **Inauguration of Yoga Sandesha.**<br>**Inauguration by:**<br>**Dr. P. Satishchandra, Vice Chancellor, NIMHANS** | 21-06-2015<br>**Sunday at 11-00 AM** | **Visvesvaraya Industrial and Technological Museum, Bengaluru.** |
| 2. | ಕ್ರಯಪತ್ರ ವಿತರಣಾ ಸಮಾರಂಭ:<br>ಉದ್ಘಾಟನೆ ಹಾಗೂ ಕ್ರಯಪತ್ರ ವಿತರಣೆ:<br>ಸಿದ್ದರಾಮಯ್ಯ, ಮುಖ್ಯಮಂತ್ರಿಗಳು.<br>ಉಪಸ್ಥಿತಿ:<br>ಡಾ. ಎಂ. ಹೆಚ್. ಅಂಬರೀಶ್, ವಸತಿ ಸಚಿವರು.<br>ಅಧ್ಯಕ್ಷತೆ:<br>ಮುನಿರತ್ನ, ಶಾಸಕರು | 21-6-2015<br>ಭಾನುವಾರ<br>ಮಧ್ಯಾಹ್ನ<br>3-30 ಗಂಟೆಗೆ | ಜೆ.ಪಿ. ಉದ್ಯಾನವನ, ಮತ್ತಿಕೆರೆ, ಬೆಂಗಳೂರು |
| 3. | **Lecture on :-**<br>**"PHOTONICS-The alternative to Electronics"**<br>**Prof. T. Srinivas, Associate Professor, ECE Department, Indian Institute of Science, Bangalore.** | 22-06-2015<br>**Monday at 11-00 AM** | **VITM Auditorium, Kasturba Road, Bangalore – 560 001.** |

| | | | |
|---|---|---|---|
| 4. | ತಿಂಗಳ ಚಿತ್ರ:<br><br>ಉದ್ಘಾಟನೆ:<br><br>ಪಿಚ್ಚಳ್ಳಿ ಶ್ರೀನಿವಾಸ್,<br>ಅಧ್ಯಕ್ಷರು,<br>ಕರ್ನಾಟಕ ಜಾನಪದ ಅಕಾಡೆಮಿ,<br>ಬೆಂಗಳೂರು.<br><br>ಅಧ್ಯಕ್ಷತೆ:<br><br>ಡಾ. ಎಂ.ಎಸ್. ಮೂರ್ತಿ,<br>ಅಧ್ಯಕ್ಷರು,<br>ಕರ್ನಾಟಕ ಲಲಿತಕಲಾ ಅಕಾಡೆಮಿ,<br>ಬೆಂಗಳೂರು. | 22-6-2015<br>ಸೋಮವಾರ<br><br>ಸಂಜೆ<br>4-00 ಗಂಟೆಗೆ | ವರ್ಣ ಗ್ಯಾಲರಿ, 2ನೇ ಮಹಡಿ,<br>ಕನ್ನಡ ಭವನ, ಜೆ.ಸಿ. ರಸ್ತೆ,<br>ಬೆಂಗಳೂರು – 560 002 |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಮೀಸಲು ನಿವೇಶನಗಳ ಹಂಚಿಕೆ

ಬೆಂಗಳೂರು, ಜೂನ್ 20 (ಕರ್ನಾಟಕ ವಾರ್ತೆ)

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಅಭಿವೃದ್ಧಿಪಡಿಸಿರುವ ಕೈಗಾರಿಕಾ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಉದ್ದಿಮೆದಾರರಿಗೆ ಹಂಚಿಕೆ ಮಾಡಲು ಮೀಸಲಿಟ್ಟಿರುವ ನಿವೇಶನಗಳ ಜಿಲ್ಲಾವಾರು, ವಲಯವಾರು ಮತ್ತು ಕೈಗಾರಿಕಾ ಪ್ರದೇಶವಾರು ವಿವರಗಳನ್ನು ಹಾಗೂ ಹಂಚಿಕೆಗಾಗಿ ಅರ್ಜಿ ಸಲ್ಲಿಸುವ ವಿಧಾನ ಮತ್ತು ಮಂಡಳಿಯ ಕೇಂದ್ರ ಕಚೇರಿ ಮತ್ತು ವಲಯ ಕಚೇರಿಗಳ ವಿಳಾಸಗಳನ್ನು ಮಂಡಳಿಯ ಜಾಲತಾಣ **www.kiadb.in** ರಲ್ಲಿ ಪ್ರಕಟಿಸಲಾಗಿದೆ.

ರಾಜ್ಯದ ಹೊಸ ಕೈಗಾರಿಕಾ ನೀತಿ 2014-19 ರ ಅನುಸಾರ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಉದ್ದಿಮೆಗಾರರಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಹಂಚಿಕೆ ಮಾಡಲಾಗುವ ನಿವೇಶನಗಳಿಗೆ ನಿವೇಶನ ದರಗಳಲ್ಲಿ ರಿಯಾಯಿತಿಯನ್ನು ನೀಡಲಾಗುವುದು.

ಹೊಸ ಕೈಗಾರಿಕಾ ನೀತಿ 2014-19 ರಲ್ಲಿ ರಾಜ್ಯದಲ್ಲಿನ ತಾಲ್ಲೂಕುಗಳನ್ನು ವಿವಿಧ ವಲಯಗಳನ್ನಾಗಿ ವರ್ಗೀಕರಿಸಿದ್ದು, ವಿವರಗಳನ್ನು ಸಹ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದ್ದು, ಆಸಕ್ತಿಯುಳ್ಳ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಉದ್ದಿಮೆದಾರರು ಅವರ ಉದ್ದೇಶಿತ ಯೋಜನೆಗೆ ಜಮೀನು

ಹಂಚಿಕೆಗಾಗಿ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಅಗತ್ಯವಿರುವ ದಾಖಲೆಗಳು/ವಿವರಗಳು ಮತ್ತು ಜಮೀನಿನ ದರದ ಶೇ 10 ರಷ್ಟು ಪ್ರಾರಂಭಿಕ ಠೇವಣಿಯೊಂದಿಗೆ ಸಲ್ಲಿಸಬಹುದಾಗಿದೆ.

ಬಾಬು:ಜಿಪಿಆರ್

## ಧನ ಸಹಾಯಕ್ಕೆ ಅರ್ಜಿ ಆಹ್ವಾನ

**ಬೆಂಗಳೂರು, ಜೂನ್ 20 (ಕರ್ನಾಟಕ ವಾರ್ತೆ)**

ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ/ಪಿಎಚ್‍ಡಿ/ಸಂಶೋಧನೆ ಮಾಡುವ ಹಿಂದುಳಿದ ವರ್ಗಗಳ ಪ್ರವರ್ಗ-I II(ಎ) , III (ಎ) ಹಾಗೂ III (ಬಿ) ಗಳಿಗೆ ಸೇರಿದ ಅರ್ಹ ವಿದ್ಯಾರ್ಥಿಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಧನಸಹಾಯ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆನ್‍ಲೈನ್ ಮೂಲಕ ಅರ್ಜಿ ಸಲ್ಲಿಸಲು ಜುಲೈ 15 ಕೊನೆಯ ದಿನಾಂಕವಾಗಿದ್ದು, ಹೆಚ್ಚಿನ ವಿವರಗಳಿಗಾಗಿ ಇಲಾಖಾ ವೆಬ್‍ಸೈಟ್ www.backwardclasses.kar.nic.in ನ್ನು ಅಥವಾ ದೂರವಾಣಿ ಸಂಖ್ಯೆ 080 – 44554444. ಸಂಪರ್ಕಿಸಬಹುದು.

ಬಾಬು:ಜಿಪಿಆರ್.

## ಕಬ್ಬನ್ ಉದ್ಯಾನವನದಲ್ಲಿ ವಿಶೇಷ ಕಾರ್ಯಕ್ರಮಗಳು

**ಬೆಂಗಳೂರು, ಜೂನ್ 20 (ಕರ್ನಾಟಕ ವಾರ್ತೆ)**

ಶ್ರೀ ಚಾಮರಾಜೇಂದ್ರ (ಕಬ್ಬನ್) ಉದ್ಯಾನವನದ ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಸಲಹೆಯಂತೆ ಪ್ರತಿ ಭಾನುವಾರಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಅದರಂತೆ ದಿನಾಂಕ 21-6-2015 ರ ಭಾನುವಾರದಂದು ಕಬ್ಬನ್ ಉದ್ಯಾನವನದ ಬ್ಯಾಂಡ್ ಸ್ಟ್ಯಾಂಡ್ ಆವರಣ, ಬ್ಯಾಂಡ್ ಸ್ಟ್ಯಾಂಡ್ ಆವರಣದ ಮುಂಭಾಗದ ರಸ್ತೆಯಲ್ಲಿ ಕೆಎಸ್‍ಎಲ್‍ಟಿಎ ಸ್ಟೇಡಿಯಂನ ಹಿಂಭಾಗದ ರಸ್ತೆ) ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 6-00 ಗಂಟೆಯಿಂದ 7-00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಉದಯರಾಗ" ಸಂಗೀತ ಕಾರ್ಯಕ್ರಮವನ್ನು ಬೆಳಿಗ್ಗೆ 7-00 ಗಂಟೆಯಿಂದ 8 ಗಂಟೆಯವರೆಗೆ ಕುಮಾರಿ ಅನುಷಾ ಕಶ್ಯಪ್‍ರವರಿಂದ ದೇವರನಾಮ, ಭಾವಗೀತೆಗಳು ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವನ್ನು

ಬೆಳಿಗ್ಗೆ 8 ಗಂಟೆಯಿಂದ 9 ಗಂಟೆಯವರೆಗೆ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಇಲಾಖೆ 3ನೇ ಪಡೆಯ ಬ್ಯಾಂಡ್ ಕಲಾವಿದರಿಂದ ಆಕರ್ಷಕ "ಪೊಲೀಸ್ ಬ್ಯಾಂಡ್" ಸಂಗೀತ ಕಾರ್ಯಕ್ರಮವನ್ನು ಹಾಗೂ ಸಂಜೆ 5 ಗಂಟೆಯಿಂದ 6 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ "ಉದ್ಯಾನವನದಲ್ಲಿ ಸಂಧ್ಯಾರಾಗ" ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಹಾಗೆಯೇ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯದ ಸಹಯೋಗದೊಂದಿಗೆ ಬಾಡಿಗೆ ರಹಿತ ಸೈಕಲ್ ಸವಾರಿ ವ್ಯವಸ್ಥೆಯ ಜೊತೆಗೆ ಉದ್ಯಾನವನದ ಆವರಣದಲ್ಲಿ ಜೈವಿಕ್ ಕೃಷಿಕ್ ಸೊಸೈಟಿ (ರಿ) ಲಾಲ್‌ಬಾಗ್ ವತಿಯಿಂದ ಸಾವಯವ ಪದ್ಧತಿಯಲ್ಲಿ ಬೆಳೆದ ಹಣ್ಣುಗಳಾದ ಮಾವು, ಪಪ್ಪಾಯ, ಏಲಕ್ಕಿ ಬಾಳೆ, ಮೂಸುಂಬಿ, ನೇರಳೆ (ಜಾಮೂನು) ಹಣ್ಣುಗಳ ಮಾರಾಟ, ಸಾವಯವ ಮಾವು, ಸೇಬು ಮತ್ತು ಸೀಬೆ ಹಣ್ಣಿನ ಜ್ಯೂಸ್, ಸಾವಯವ ಸೀಬೆ, ಮಾವಿನ ಹಣ್ಣಿನ ಫ್ರೂಟ್‌ಬಾರ್‌ಗಳು, ಸಾವಯವ ಹಲಸಿನ ಹಣ್ಣಿನ ಚಿಪ್ಸ್ ಮತ್ತು ಇತರೆ ಸಾವಯವ ಆಹಾರ ಪದಾರ್ಥಗಳ ಮಾರಾಟವನ್ನು ಹಾಗೂ ದಿ ನರ್ಸರಿಮೆನ್ ಕೋ-ಆಪರೇಟೀವ್ ಸೊಸೈಟಿ, ಲಾಲ್‌ಬಾಗ್, ಇವರ ವತಿಯಿಂದ ವಿವಿಧ ಅಲಂಕಾರಿಕ ಗಿಡಗಳು ಮತ್ತು ಉದ್ಯಾನವನ ಸಲಕರಣೆ ಮಾರಾಟ ಮತ್ತು ಮನೆಗಳಿಗೆ ಅಗತ್ಯವಿರುವ ಗಿಡಗಳ ಮಾರಾಟಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ.

ಗ್ರಂಥಾಲಯ ಇಲಾಖೆ, ಬೆಂಗಳೂರುರವರ ವತಿಯಿಂದ ನಗರ ಕೇಂದ್ರ ಗ್ರಂಥಾಲಯ ಮತ್ತು ಇಂದಿರಾ ಪ್ರಿಯದರ್ಶಿನಿ ಮಕ್ಕಳ ಗ್ರಂಥಾಲಯದ ಆವರಣದಲ್ಲಿ ಪುಸ್ತಕಗಳ ಪ್ರದರ್ಶನವನ್ನು ಏರ್ಪಡಿಸಲಾಗಿದೆ.

## ಜೂನ್ 21 ರ ವಿಶೇಷ ಕಾರ್ಯಕ್ರಮಗಳು:

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆರವರ ಸಹಯೋಗದೊಂದಿಗೆ ಬೆಳಿಗ್ಗೆ 9-30 ರಿಂದ 10-30 ರವರೆಗೆ ವಿಶ್ವ ಯೋಗ ದಿನದ ಅಂಗವಾಗಿ ಆಚಾರ್ಯ ಎಂ. ನಿರಂಜನ ಮೂರ್ತಿ **Chief Co ordinator, Internationl Yoga Federation** ರವರಿಂದ ಯೋಗ ಕಲಿಕೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ತೋಟಗಾರಿಕೆ ಇಲಾಖೆ ವತಿಯಿಂದ ಫರ್ನ ಹಿಲ್ ಗಾರ್ಡನ್, ಊಟಿ ಉದ್ಯಾನವನದಲ್ಲಿ ಬೆಳೆದ ವಿವಿಧ ಶೀತಲವಲಯದ ಹೂವುಗಳಾದ ಆಲ್‌ಸ್ಟ್ರೋಮೇರಿಯಾ ಲಿಲ್ಲಿ ಹೂಗಳು, ಕಾರ್ನೇಷನ್ ಮತ್ತು ವಿವಿಧ ಎಲೆ ಜಾತಿಯ ಸಸ್ಯಗಳ (ಫೋಲಿಯೇಜ್) ಪ್ರದರ್ಶನ ಮತ್ತು ಮಾರಾಟವನ್ನು ಏರ್ಪಡಿಸಲಾಗಿದೆ.

ಚಿತ್ರಕಲಾ ಪರಿಷತ್, ಬೆಂಗಳೂರುರವರಿಂದ ಸ್ಥಳದಲ್ಲಿ ಚಿತ್ರಗಳನ್ನು ಬಿಡಿಸುವ ಕಾರ್ಯಕ್ರಮ ಮತ್ತು ಚಿತ್ರಕಲೆಯ ಪ್ರದರ್ಶನದ ಕಾರ್ಯಕ್ರಮವನ್ನು ಹಾಗೂ ಸ್ವಪ್ನ ಬುಕ್ ಹೌಸ್, ಬೆಂಗಳೂರುರವರ ವತಿಯಿಂದ ಆರೋಗ್ಯ, ಆಹಾರ, ಕಲೆ, ಸಂಸ್ಕೃತಿ, ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಪುಸ್ತಕ ಪ್ರದರ್ಶನ ಮತ್ತು ಮಾರಾಟವನ್ನು ಏರ್ಪಡಿಸಲಾಗಿದೆ.

ಬಾಬು:ಜಿಪಿಆರ್.

# ಕೃಷ್ಣಾ ಮೇಲ್ದಂಡೆ ಯೋಜನೆ 3ನೇ ಹಂತದ ಭೂಸ್ವಾಧೀನ ಪ್ರಕ್ರಿಯೆ ಹಾಗೂ ಖಾಲಿ ಹುದ್ದೆಗಳ ಭರ್ತಿ

ಬೆಂಗಳೂರು, ಜೂನ್ 20 (ಕರ್ನಾಟಕ ವಾರ್ತೆ)

ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಭೂಸ್ವಾಧೀನ ಪ್ರಕ್ರಿಯೆ ಹಾಗೂ ಖಾಲಿ ಹುದ್ದೆಗಳ ಭರ್ತಿ ಕುರಿತು ದಿನಾಂಕ 17-06-2015 ರಂದು ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಗೃಹ ಕಚೇರಿ **"ಕೃಷ್ಣಾ"** ದಲ್ಲಿ ಸಭೆ ನಡೆದಿದ್ದು, ಈ ಸಭೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ 3ನೇ ಹಂತದ ಕಾಮಗಾರಿಗೆ ಭೂಸ್ವಾಧೀನ ಪ್ರಕ್ರಿಯೆ ಚುರುಕುಗೊಳಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಬಾಗಲಕೋಟೆ ಪುನರ್ವಸತಿ ವ್ಯಾಪ್ತಿಯಲ್ಲಿ ಭೂದಾಖಲೆಗಳ ಕಚೇರಿಯನ್ನು ಹೊಸದಾಗಿ ತೆರೆಯಲು ಹಾಗೂ ಜಂಟಿ ನಿರ್ದೇಶಕರ, ಉಪ ನಿರ್ದೇಶಕರ, ಸಹಾಯಕ ನಿರ್ದೇಶಕರ ಮತ್ತು ಸರ್ವೇಯರ್ಸ್ ಹುದ್ದೆಗಳ ಸೃಜನೆಗೆ ಈ ಸಭೆಯಲ್ಲಿ ತಾಂತ್ರಿಕ ಒಪ್ಪಿಗೆ ದೊರಕಿದ್ದು, ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಪಟ್ಟಂತೆ ವಿಶೇಷ ಜಿಲ್ಲಾಧಿಕಾರಿ ಹೆಚ್ಚುವರಿಯಾಗಿ ಆಲಮಟ್ಟಿ, ಜಮಖಂಡಿ ಮತ್ತು ಬೀಳಗಿಯಲ್ಲಿ ಒಂದೊಂದು ಭೂಸ್ವಾಧೀನ ಕಚೇರಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ತೋಟಗಾರಿಕೆ ನಿರ್ದೇಶಕರ ಕಚೇರಿ ಆರಂಭಿಸಲು ಮತ್ತು ಅಗತ್ಯ ಇರುವ ಅಧಿಕಾರಿಗಳು ಹಾಗೂ 138 ಹುದ್ದೆ ಸೃಷ್ಟಿಸಿ ಭರ್ತಿ ಮಾಡಿಕೊಳ್ಳಲು ತೀರ್ಮಾನಿಸಲಾಯಿತು.

ಅಲ್ಲದೆ ಬಾಗಲಕೋಟೆ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಚೇರಿಯಲ್ಲಿ ಖಾಲಿ ಇರುವ 1 ಭೂಸ್ವಾಧೀನ ಅಧಿಕಾರಿಗಳು ಹಾಗೂ 2 ಪುನರ್ವಸತಿ ಅಧಿಕಾರಿಗಳ ಹುದ್ದೆ ಭರ್ತಿ ಹಾಗೂ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದಲ್ಲಿ ಖಾಲಿ ಇರುವ ಒಂದು ಪುನರ್ ವಸತಿ ಅಧಿಕಾರಿ ಹುದ್ದೆ ಮತ್ತು 1-2 ಇಂಜಿನಿಯರ್‌ಗಳ ನೇಮಕಾತಿಗೆ ಸಭೆ ಸಹಮತಿ ಸೂಚಿಸಿದೆ.

ಈ ಯೋಜನೆಯ 3ನೇ ಹಂತದಲ್ಲಿ ಮುಳುಗಡೆಯಾಗುವ 30,000 ಎಕರೆ ಭೂಸ್ವಾಧೀನ ಪ್ರಕ್ರಿಯೆ ಕುರಿತು ಸಭೆಯಲ್ಲಿ ಮೆಚ್ಚುಗೆಯ ಮಾತುಗಳು ಕೇಳಿ ಬಂದಿದ್ದು ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡಿಕೊಂಡು ಭೂಸ್ವಾಧೀನ ಪ್ರಕ್ರಿಯೆಯನ್ನು ಹೊಸ ಭೂಸ್ವಾಧೀನ ಕಾಯ್ದೆಯನ್ವಯ ಮತ್ತಷ್ಟು ಚುರುಕುಗೊಳಿಸಲು ತಿಳಿಸಲಾಗಿದೆ.

ಸಭೆಯಲ್ಲಿ ಜಲ ಸಂಪನ್ಮೂಲ ಸಚಿವ ಎಂ.ಬಿ. ಪಾಟೀಲ, ಸರ್ಕಾರ ಅಪರ ಮುಖ್ಯ ಕಾರ್ಯದರ್ಶಿ ಪಿ.ಬಿ. ರಾಮಮೂರ್ತಿ, ಸರ್ಕಾರದ ಪ್ರಧಾನ ಕಾರ್ಯದರ್ಶಿ ಬಿ. ಬಸವರಾಜು, ಕೃಷ್ಣಾ ಭಾಗ್ಯ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಜಯ ಸೇಠ್, ಆಯುಕ್ತ, ಪುನರ್ವಸತಿ ಮತ್ತು ಪುನರ್ನಿರ್ಮಾಣ, ಶಿವಯೋಗಿ ಕಳಸದ, ಸರ್ಕಾರದ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ ಗುರುಪಾದಸ್ವಾಮಿ, ಆರ್ಥಿಕ ಇಲಾಖೆಯ ಹಿರಿಯ ಅಧಿಕಾರಿಗಳು, ಸಮಿತಿ ಸದಸ್ಯರು ಸಭೆಯಲ್ಲಿ ಪಾಲ್ಗೊಂಡಿದ್ದರು ಎಂದು ಜಲ ಸಂಪನ್ಮೂಲ ಸಚಿವರ ಕಚೇರಿ ಪ್ರಕಟಣೆ ತಿಳಿಸಿದೆ.

ಬಾಬು:ಜಿಪಿಆರ್.

## ಫಲಾನುಭವಿಗಳಿಗೆ ಕ್ರಯಪತ್ರ ವಿತರಣೆ

**ಬೆಂಗಳೂರು, ಜೂನ್ 20 (ಕರ್ನಾಟಕ ವಾರ್ತೆ)**

ಕರ್ನಾಟಕ ರಾಜ್ಯದಲ್ಲಿನ ಕೊಳಗೇರಿ ಪ್ರದೇಶಗಳಲ್ಲಿ ಹುಡ್ಕೋ ಮತ್ತು ವಾಂಬೆ ಯೋಜನೆಯಡಿ ವಸತಿ ಇಲಾಖೆ ಮತ್ತು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ನಿರ್ಮಿಸಿರುವ ಮನೆಗಳ ಕ್ರಯಪತ್ರವನ್ನು ನಾಳೆ ಮಧ್ಯಾಹ್ನ 3-30 ಗಂಟೆಗೆ ಮತ್ತಿಕೆರೆಯ ಜೆ.ಪಿ. ಉದ್ಯಾನವನದಲ್ಲಿ ಫಲಾನುಭವಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿತರಿಸುವರು.

ಈ ಕಾರ್ಯಕ್ರಮದಲ್ಲಿ ವಸತಿ ಸಚಿವ ಡಾ. ಎಂ. ಹೆಚ್. ಅಂಬರೀಶ್, ಕೇಂದ್ರ ನಗರಾಭಿವೃದ್ಧಿ, ವಸತಿ ಮತ್ತು ಬಡತನ ನಿರ್ಮೂಲನೆ ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾದ ಎಂ. ವೆಂಕಯ್ಯ ನಾಯ್ಡು, ಶಾಸಕ ಮುನಿರತ್ನ, ಸೇರಿದಂತೆ ಮತ್ತಿತರ ಗಣ್ಯವಕ್ತಿಗಳು ಉಪಸ್ಥಿತರಿರುವರು.

ಪೂರ್ಣಿಮ:ಜಿಪಿಆರ್.

## ಕೌಶಲ್ಯ ಅಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನ

**ಬೆಂಗಳೂರು, ಜೂನ್ 20 (ಕರ್ನಾಟಕ ವಾರ್ತೆ)**

ಜುಲೈ 2 ರಿಂದ 31 ರವರೆಗೆ ತೋಟಗಾರಿಕೆ ಮಹಾ ವಿದ್ಯಾಲಯ, (ಎನ್‌ಹೆಚ್ 4) ತಮಕ, ಕೋಲಾರ ಇಲ್ಲಿ ಒಂದು ತಿಂಗಳ ಅವಧಿಯ ತೋಟಗಾರಿಕೆಯಲ್ಲಿ ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ತೋಟಗಾರಿಕೆ ಇಲಾಖೆ ಹಮ್ಮಿಕೊಂಡಿದೆ.

ಕನ್ನಡ ವಿಷಯಗಳೊಂದಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ 18 ವರ್ಷ ಮೇಲ್ಪಟ್ಟ ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ತುಮಕೂರು, ರಾಮನಗರ, ಚಿಕ್ಕಬಳ್ಳಾಪುರ, ಕೋಲಾರ, ದಕ್ಷಿಣ ಕನ್ನಡ, ಕೊಡಗು, ಮಂಡ್ಯ, ಹಾಸನ, ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಗಳಲ್ಲಿನ ಅರ್ಹ ಅಭ್ಯರ್ಥಿಗಳು ಅರ್ಜಿಗಳನ್ನು ಆಯಾ ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರ ಕಚೇರಿಯಿಂದ ಪಡೆದು ಜೂನ್ 27 ರೊಳಗೆ ಅರ್ಜಿ ಸಲ್ಲಿಸಬೇಕು.

ಅಭ್ಯರ್ಥಿಯ ತಂದೆ ಅಥವಾ ಪೋಷಕರು ಕಡ್ಡಾಯವಾಗಿ ಜಮೀನು ಹೊಂದಿರಬೇಕು ಹಾಗೂ ಸ್ವಂತ ಸಾಗುವಳಿ ಮಾಡುತ್ತಿರಬೇಕು. ಈ ಬಗ್ಗೆ ಪಹಣಿ ನೀಡುವುದು ಕಡ್ಡಾಯವಾಗಿರುತ್ತದೆ. ಅಭ್ಯರ್ಥಿಗಳನ್ನು ಜೂನ್ 29 ರಂದು ಸಂದರ್ಶನದ ಮುಖಾಂತರ ಆಯ್ಕೆ ಮಾಡಲಾಗುವುದು.

ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾಸಿಕ ರೂ. 2000/- ಗಳ ಶಿಷ್ಯವೇತನ ನೀಡಲಾಗುವುದು.

ಹೆಚ್ಚಿನ ಮಾಹಿತಿಗೆ ಆಯಾ ಜಿಲ್ಲಾ ತೋಟಗಾರಿಕೆ ಉಪ ನಿರ್ದೇಶಕರ ಕಚೇರಿ, ಅಥವಾ ಸಹಾಯಕ ತೋಟಗಾರಿಕೆ ನಿರ್ದೇಶಕರು, ತೋಟಗಾರಿಕೆ ತರಬೇತಿ ಕೇಂದ್ರ, ಲಾಲ್‌ಬಾಗ್ ಇವರನ್ನು ದೂರವಾಣಿ ಸಂಖ್ಯೆ 080 – 26564538 ಮೂಲಕ ಸಂಪರ್ಕಿಸಬಹುದಾಗಿದೆ.

**ಪೂರ್ಣಿಮ:ಜಿಪಿಆರ್.**

# ತಿಂಗಳ ಚಿತ್ರ ಕಾರ್ಯಕ್ರಮ

ಬೆಂಗಳೂರು, ಜೂನ್ 20 (ಕರ್ನಾಟಕ ವಾರ್ತೆ)

ಕರ್ನಾಟಕ ಲಲಿತಕಲಾ ಅಕಾಡೆಮಿ ವತಿಯಿಂದ ತಿಂಗಳ ಚಿತ್ರ ಯೋಜನೆಯಡಿ ಜೂನ್ 22 ರಂದು ವರ್ಣ ಗ್ಯಾಲರಿ, 2ನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 560 002 ಇಲ್ಲಿ ಯುವ ಕಲಾವಿದರಾದ ಕು. ಪುಷ್ಪಾ ಮೋಟಗಿ, ಶ್ರೀ ಮಹೇಶ್, ಶ್ರೀ ವಿಶ್ವನಾಥ್ ಎಂ. ತಂಬಾಕೆ, ಕು. ಸುಜಾತ ಎಸ್. ಆವಂತಿ ಇವರ ಕಲಾಕೃತಿಗಳ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ.

ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಶ್ರೀ ಪಿಚ್ಚಳ್ಳಿ ಶ್ರೀನಿವಾಸ ಅವರು ಅಂದು ಸಂಜೆ 4–00 ಗಂಟೆಗೆ ತಿಂಗಳ ಚಿತ್ರವನ್ನು ಉದ್ಘಾಟನೆ ಮಾಡಲಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷ ಡಾ. ಎಂ. ಎಸ್. ಮೂರ್ತಿ ಅವರು ವಹಿಸಲಿದ್ದಾರೆ.

ಜೂನ್ 22 ರಿಂದ 26 ರವರೆಗೆ ಬೆಳಿಗ್ಗೆ 11–00 ರಿಂದ ಸಂಜೆ 6–00 ರವರೆಗೆ ಸಾರ್ವಜನಿಕರ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

ಪೂರ್ಣಿಮ:ಜಿಪಿಆರ್.

# ಲಿಮ್ಕಾ ಆಫ್ ರೆರ್ಕಾಡ್ಸ್‌ಗಾಗಿ 3600 ಎನ್.ಸಿ.ಸಿ. ಕೆಡೆಟ್ಸ್‌ನಿಂದ ಯೋಗ

ಬೆಂಗಳೂರು, ಜೂನ್ 20 (ಕರ್ನಾಟಕ ವಾರ್ತೆ)

ನಾಳೆ ಅಂತರಾಷ್ಟ್ರೀಯ ಯೋಗ ದಿನಾಚರಣೆ ಹಿನ್ನಲೆಯಲ್ಲಿ ನವದೆಹಲಿಯ ಎನ್.ಸಿ.ಸಿ. ಮುಖ್ಯ ಕಚೇರಿಯ ವತಿಯಿಂದ ಲಿಮ್ಕಾ ಬುಕ್ ಆಫ್ ರೆರ್ಕಾಡ್ಸ್‌ಗಾಗಿ ಎನ್.ಸಿ.ಸಿ. ಕೆಡೆಟ್ಸ್‌ಗಳಿಂದ ಯೋಗವನ್ನು ಪ್ರಸ್ತುತಪಡಿಸುತ್ತಿದ್ದು, ಈ ದಾಖಲೆಗಾಗಿ ಕರ್ನಾಟಕ ಮತ್ತು ಗೋವಾದ 3600 ಕೆಡೆಟ್ಸ್‌ಗಳಿಂದ ಮಾಣಿಕ್‌ಷಾ ಪರೇಡ್ ಗ್ರೌಂಡ್ಸ್ ಮತ್ತು ಸೆಂಟ್ರಲ್ ಕಾಲೇಜ್ ಕ್ರಿಕೆಟ್ ಗ್ರೌಂಡ್ಸ್‌ನಲ್ಲಿ (ಫ್ರೀಡಮ್ ಪಾರ್ಕ್ ಹಿಂಭಾಗ) ನಾಳೆ ಬೆಳಿಗ್ಗೆ 7 ರಿಂದ 7–35 ಗಂಟೆವರೆಗೆ ಯೋಗವನ್ನು ಪ್ರಸ್ತುತ ಪಡಿಸಲಿದ್ದಾರೆ.

ಪೂರ್ಣಿಮ:ಜಿಪಿಆರ್.